ಕರ್ನಾಟಕ ಸರ್ಕಾರ

32

ಸಂಖ್ಯೆ: ಸಿಆಸುಇ 27 ಸೇಸೇನಿ 94.

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 24.08.1994.

## ಅಧಿಕೃತ ಜ್ಞಾಪನ

ವಿಷಯ: ಇಲಾಖಾ ಮುಖ್ಯಸ್ಥರು : ತತ್ಸಮಾನ ಗ್ರೇಡ್‌ನ ಜಿಲ್ಲಾ ಮುಖ್ಯಸ್ಥರ ಹುದ್ದೆಗಳಿಗೆ ಆಯ್ಕೆ ಮೂಲಕ ಬಡ್ತಿ — ಅನುಸರಿಸ—ಬೇಕಾದ ವಿಧಾನ.

ಉಲ್ಲೇಖ: ಆದೇಶ ಸಂಖ್ಯೆ: ಸಿಆಸುಇ 14 ಸೇಸೇನಿ 93, ದಿನಾಂಕ: 17—3—1993.

---

ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ಮುಖ್ಯಸ್ಥರ : ತತ್ಸಮಾನ ಗ್ರೇಡ್‌ನ ಅಪರ ಇಲಾಖಾ ಮುಖ್ಯಸ್ಥರುಗಳ ಹುದ್ದೆಗಳಿಗೆ ಆಯ್ಕೆ ಮೂಲಕ ಬಡ್ತಿಯನ್ನು ನೀಡಲು ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿ ಆಯ್ಕೆಯನ್ನು ಯಾವ ರೀತಿ ಮಾಡಬೇಕು ಎನ್ನುವುದರ ಬಗ್ಗೆ ಪಾಲಿಸಬೇಕಾದ ವಿಧಾನವನ್ನು ಸೂಚಿಸುವ ಅವಶ್ಯಕತೆಯನ್ನು ಸರ್ಕಾರ ಪರಿಶೀಲಿಸಿ ಕೆಳಕಂಡ ಮಾರ್ಗ ಸೂಚನೆಗಳನ್ನು ನೀಡಿದೆ.

ಆಯ್ಕೆ ಸಮಿತಿಯು ಪರಿಗಣನಾವಲಯದೊಳಗೆ ( Zone of Considera-tion) ಬರುವ ಮುಂಬಡ್ತಿಗೆ ಅರ್ಹರಾದ ಎಲ್ಲಾ ಅಧಿಕಾರಿಗಳನ್ನು, ಅವರುಗಳ ಸೇವಾ ದಾಖಲೆಗಳ ಒಟ್ಟಾರೆ ಸಾಪೇಕ್ಷ ನಿರ್ಧಾರಣೆಯ ಮೇಲೆ, 'ಅತ್ಯುತ್ತಮ', 'ತುಂಬಾ ಉತ್ತಮ' ಮತ್ತು 'ಉತ್ತಮ' ಎಂದು ವರ್ಗೀಕರಿಸಬೇಕು ಮತ್ತು ಅಗತ್ಯ ಸಂಖ್ಯೆಯ ಹೆಸರುಗಳುಳ್ಳ ಅಂತಿಮ ಪಟ್ಟಿಯನ್ನು ಸಿದ್ಧಪಡಿಸಬೇಕು. ಈ ರೀತಿ ಅಧಿಕಾರಿಗಳ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವಾಗ, ಮೊದಲು ''ಅತ್ಯುತ್ತಮ'' ಎಂದು ವರ್ಗೀಕರಿಸಲ್ಪಟ್ಟ ಅಧಿಕಾರಿಗಳನ್ನು ಜೇಷ್ಠತಾ ಪಟ್ಟಿಯಲ್ಲಿನ ಅವರುಗಳ ಪರಸ್ಪರ ಜೇಷ್ಠತೆಯ ಅನುಸಾರವಾಗಿಯೂ; ನಂತರ ''ತುಂಬಾ ಉತ್ತಮ'' ಎಂದು ವರ್ಗೀಕರಿಸಲ್ಪಟ್ಟ ಅಧಿಕಾರಿಗಳ ಹೆಸರುಗಳನ್ನು ಅವರುಗಳ ಪರಸ್ಪರ ಜೇಷ್ಠತಾನುಸಾರವಾಗಿಯೂ; ತದನಂತರ ''ಉತ್ತಮ'' ಎಂದು ವರ್ಗೀಕರಿಸಲ್ಪಟ್ಟ ಅಧಿಕಾರಿಗಳ ಹೆಸರುಗಳನ್ನು ಅವರುಗಳ ಪರಸ್ಪರ ಜೇಷ್ಠತಾನುಸಾರವಾಗಿಯೂ ಕ್ರಮವಾಗಿ ಸೇರಿಸಬೇಕು.

ಒಂದು ವೇಳೆ ಯಾವುದೇ ಅಧಿಕಾರಿಯ ವಿರುದ್ಧ ಯಾವುದೇ ವಿಚಾರಣೆಯನ್ನು ಪ್ರಾರಂಭಿಸಲಾಗಿದ್ದರೆ ಅಥವ ಯಾವುದೇ ಅಧಿಕಾರಿಯ ವಿರುದ್ಧ ಪ್ರತಿಕೂಲ ವಿಷಯವು ರಾಜ್ಯ ಸರ್ಕಾರದ ಗಮನಕ್ಕೆ ಬಂದಿದ್ದರೆ, ಅಂತಹಾ ಅಧಿಕಾರಿಯ ಹೆಸರನ್ನು ಆಯ್ಕೆ ಪಟ್ಟಿಯಲ್ಲಿ ಸೇರಿಸಲಾಗಿರುವುದು ''ತಾತ್ಕಾಲಿಕ'' ಎಂದು ಪರಿಗಣಿಸತಕ್ಕದ್ದು.

24/8/94

(ಪಿ. ರಘುನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ—1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ,
(ಸೇವಾ ನಿಯಮಗಳು)

ಗೆ,

1) ಮುಖ್ಯ ಕಾರ್ಯದರ್ಶಿ : ಅಪರ ಮುಖ್ಯ ಕಾರ್ಯದರ್ಶಿಗಳ : ಆಪ್ತ ಸಹಾಯಕರು.